ಪಿಡಬ್ಲ್ಯೂ: 2                                                    ಅಸಲು ದಾವೆ ನಂ.558/2021

**ದಿನಾಂಕ 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ  ಪ್ರತಿವಾದಿ ಪರ ವಕೀಲರಿಂದಃ-**

1. ನಾನು ವಿದ್ಯಾಭ್ಯಾ ಸ ಮಾಡಿಲ್ಲ. ವಾದಿ ನಮ್ಮ ಕುಲಸ್ಥರು. ನನಗೆ ಈಗ 50 ವರ್ಷ ವಯಸ್ಸು.  ವಾದಿಯ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯ ಸಂಖ್ಯೆಯೂ ನನಗೆ ಗೊತ್ತಿಲ್ಲ. ಅವರಿಬ್ಬರ ನಡುವೆ ಮೊದಲು ಯಾವ ಯಾವ ಕೇಸುಗಳು ನಡೆದಿವೆ ಎಂದು ನನಗೆ ಗೊತ್ತಿಲ್ಲ. ಆ ಕೇಸಿನ ಸಂಖ್ಯೆಗಳೂ ನನಗೆ ಗೊತ್ತಿಲ್ಲ.

2. ದಾವಾ ಆಸ್ತಿಯ ಅಳತೆಯನ್ನು ನಾನು ಮಾಡಿಲ್ಲ. ವಾದಿ ಈ ದಾವೆಯಲ್ಲಿ ಏನೆಂದು ಪರಿಹಾರ ಕೇಳಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ವಾದಿಯೊಂದಿಗೆ ನಗರಸಭೆಗೆ ಎಂದಿಗೂ ಹೋಗಿಲ್ಲ.

3. ದಾವಾ ಆಸ್ತಿ ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ವಾದಿ & ಪ್ರತಿವಾದಿಯ ಆಸ್ತಿಯ ಚೆಕ್ ಬಂದಿ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ಆಸ್ತಿಯ ದಾಖಲೆಯನ್ನು ನಾನು ನೋಡಿಲ್ಲ. ಆ ಏರಿಯಾ ಕಚ್ಚಾ ಲೇಔಟ್ ಎಂದರೆ ಸರಿ. ರಸ್ತೆ, ಪಾರ್ಕ್ ಇಲ್ಲದೇ ಇರುವುದೇ ಕಚ್ಚಾ ಲೇಔಟ್ ಎಂದರೆ ಸಾಕ್ಷಿಯು ಮೊದಲಿರಲಿಲ್ಲ, ಈಗ ಬಂದಿರುತ್ತವೆ ಎನ್ನುತ್ತಾರೆ. ಅಂದರೆ ಮೊದಲು ಅವುಗಳಿಗೆ ಜಾಗವನ್ನು ಬಿಡುವ ಅವಶ್ಯಕತೆ ಇರಲಿಲ್ಲವಾ ಎಂದರೆ ಸಾಕ್ಷಿಯು ಅದು ನಗರಸಭೆಯವರಿಗೆ & ಪ್ಲಾಟ್‌ಮಾಡಿದರಿಗೆ ಗೊತ್ತು ಎನ್ನುತ್ತಾರೆ.

4. ವಾದಿ ಸದರಿ ವ್ಯವಸ್ಥೆ ಇಲ್ಲದೇ ಇದ್ದರೂ ಸಹ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನೂ ಸಹ ಅನಧೀಕೃತ ಪ್ಲಾಟಿನಲ್ಲಿದ್ದೇನೆ, ಮೊದಲು ಅಪ್ರೂವ್ಡ್ ಲೇಔಟ್ ಇರಲಿಲ್ಲ ಎನ್ನುತ್ತಾರೆ. ನನ್ನ ಪ್ಲಾಟಿನ ಸಿಎಂಸಿ ನಂ.166.  ನನ್ನ ಆಸ್ತಿಯ ನಮೂನೆ-3 ನ್ನು ನಾನು ನೋಡಿರುತ್ತೇನೆ. ಎಷ್ಟು ಅಡಿ ರಸ್ತೆ ಇರುತ್ತದೆಯೋ ಅಷ್ಟು ಅಡಿ ರಸ್ತೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ.

5. ನನ್ನ ಸಮಕ್ಷಮ ನಗರಸಭೆಯರು ದಾವಾ ಆಸ್ತಿಯನ್ನು ಪರಿಶೀಲನೆ ಮಾಡಿಲ್ಲ.

6. ನಿಮ್ಮ ಮು.ಪ್ರ.ಪತ್ರಕ್ಕೆ ಮಾಹಿತಿಯನ್ನು ವಾದಿಯೇ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಅದರಲ್ಲಿ ಬರೆದ ವಿಷಯದ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲಃ-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಪಿಡಬ್ಲೂ: 2

ಅಸಲು ದಾವೆ ನಂ.558/2021

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.